ರಾಜ್ಯದಲ್ಲಿ ಸರ್ಕಾರಿ ಜಮೀನಿನ ಒತ್ತುವರಿ ಬಗ್ಗೆ

೮೩೭ (೧೪೧೦ಎ) ಶ್ರೀ ನಾರಾಯಣರಾವ್ ಮನೋಳಿ (ಬೀದರ್). —ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಎಲ್ಲೆಡೆಯಲ್ಲಿಯೂ ಸರ್ಕಾರಿ ಜಮೀನುಗಳ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು). —

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಾಗಡಿ ಟೌನ್‌ನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ

೮೩೮ (೧೫೦೪) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಮಾಗಡಿ ಟೌನ್‌ನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ ಇಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ, ಮಾಗಡಿ ಟೌನ್‌ನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿಯನ್ನು ಸ್ಥಾಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಇ) ಸದರಿ ಕಛೇರಿಯನ್ನು ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು). —

ಅ) ಹೌದು.

ಆ) ಸಧ್ಯಕ್ಕೆ ಇದರ ಆವಶ್ಯಕತೆ ಕಾಣ ಬರುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ಮಾಗಡಿ ತಾಲ್ಲೂಕು ಕುದೂರು ಮಂಡಲ ಪಂಚಾಯಿತಿಯವರಿಂದ ೧೨ ಎಕರೆ ಭೂಸ್ವಾಧೀನಪಡಿಸಿಕೊಂಡಿರುವ ಬಗ್ಗೆ

೮೩೯ (೧೫೭೫) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

೧) ಮಾಗಡಿ ತಾಲ್ಲೂಕು, ಕುದೂರು ಮಂಡಲ ಪಂಚಾಯಿತಿ ಯವರಿಂದ ಪ್ರಥಮ ದರ್ಜೆ ಕಾಲೇಜು ಕಟ್ಟುವುದಕ್ಕೋಸ್ಕರ ೧೨ ಎಕರೆ ಭೂಸ್ವಾಧೀನ ಪಡಿಸಲು ಬಂದಿರುವ ಪ್ರಬಲಗು?

೨) ಯಾವಾಗ ಪ್ರಬಲಗು ಬಂದಿರುತ್ತದೆ ?

೩) ಪ್ರಥಮ ದರ್ಜೆ ಕಾಲೇಜು ಕಟ್ಟಡವು ಯಾವ ಹಂತದಲ್ಲಿರುತ್ತದೆ ? ಭೂಸ್ವಾಧೀನ ಪ್ರಗತಿ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು). —

೧) ರೂಪಾಯಿ ೬೨,೦೬೫–೦೦.

೨) ದಿನಾಂಕ: ೧೯–೫–೮೩ ರಂದು ಕುದೂರು ಮಂಡಲ ಪಂಚಾಯಿತ್ರಿ ಇಂದ ಠೇವಣಿಯಾಗಿರುತ್ತದೆ.

೩) ಠೇವಣಿ ಮಾಡಲಾದ ಹಣವನ್ನು ಕುದೂರು ಮಂಡಲ ಪಂಚಾಯಿತ್ರಿಯು ಹಿಂಪಡೆದಿದ್ದು ಅದನ್ನು ೨೩–೯–೮೯ರಂದು ಹಿಂದಿರುಗಿಸಿದೆ. ಸದ್ಯದಲ್ಲಿ ಯಾವುದೇ ಭೂಸ್ವಾಧೀನ ನಡವಳಿಕೆ ಬಾಕಿ ಇರುವುದಿಲ್ಲ.